## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 309
2. ಮಾನ್ಯ ಸದಸ್ಯರ ಹೆಸರು : ಡಾ.ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 12.08.2025
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಸ್ತುತ ರಾಜ್ಯದಲ್ಲಿ ಎಷ್ಟು ಇಥೆನಾಲ್ ಉತ್ಪಾದನಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ; ಎಷ್ಟು ಘಟಕಗಳಿಗೆ ಅನುಮತಿ ನೀಡಲಾಗಿದೆ; | ರಾಜ್ಯದಲ್ಲಿ 2025-26ನೇ ಅಬಕಾರಿ ಸಾಲಿಗೆ ಒಟ್ಟು 54 ಇಥೆನಾಲ್ ಉತ್ಪಾದನಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಕಾರ್ಯನಿರತ ಇಥನಾಲ್ ಘಟಕಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| (ಆ) | ರಾಜ್ಯದಲ್ಲಿನ ಎಷ್ಟು ಸಕ್ಕರೆ ಕಾರ್ಖಾನೆಗಳು ಇಥೆನಾಲ್ ಉತ್ಪಾದನೆ ಮಾಡುತ್ತಿವೆ; | 2024-25ನೇ ಹಂಗಾಮಿನಲ್ಲಿ ರಾಜ್ಯದಲ್ಲಿ ಒಟ್ಟು 79 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿರುತ್ತವೆ. ಈ ಪೈಕಿ 41 ಸಕ್ಕರೆ ಕಾರ್ಖಾನೆಗಳು ಎಥನಾಲ್ / ಡಿಸ್ಟಿಲರಿ ಘಟಕಗಳನ್ನು ಹೊಂದಿರುತ್ತವೆ. |
| (ಇ) | ಇಥೆನಾಲ್ ಉತ್ಪಾದನೆಗೆ ಅಗತ್ಯವಿರುವ ಮೂಲಸೌಕರ್ಯ, ಲೈಸೆನ್ಸ್ ಅನುಮತಿ ಹಾಗೂ ಹಣಕಾಸು ನೆರವಿನ ಕುರಿತು ಸರ್ಕಾರ ರೂಪಿಸಿರುವ ನಿಯಮ ಹಾಗೂ ಮಾನದಂಡಗಳೇನು; | ಕೇಂದ್ರ ಸರ್ಕಾರವು ಅಧಿಸೂಚನೆ ಸಂಖ್ಯೆ.27/2016, ದಿನಾಂಕ:14.05.2016 ರಂತೆ The Industries (Development and Regulation) Act, 1951 (IDR Act) ಕ್ಕೆ ತಿದ್ದುಪಡಿ ತಂದು First Schedule ನಲ್ಲಿ "26 Fermentation Industries" ಶೀರ್ಷಿಕೆ ಬದಲಾಗಿ "26 Fermentation Industries (Other than potable alcohol)" ಅನ್ನು ಪ್ರತಿಸ್ಥಾಪಿಸಿದ್ದು, ಸದರಿ ತಿದ್ದುಪಡಿ ನಂತರ "ಇಥನಾಲ್ ಸಂಬಂಧಿತ ಎಲ್ಲಾ ಚಟುವಟಿಕೆಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುತ್ತವೆ. ಸದರಿ ತಿದ್ದುಪಡಿ ನಂತರ ಅಬಕಾರಿ ಇಲಾಖೆಯಿಂದ ಇಥೆನಾಲ್ ಉತ್ಪಾದನೆಗೆ ಸನ್ನದು ನೀಡಲಾಗುತ್ತಿಲ್ಲ. |
| (ಈ) | ಇಥೆನಾಲ್ ಉತ್ಪಾದನೆಯ ಮೂಲಕ ರೈತರಿಗೆ ಹೆಚ್ಚಿನ ಆದಾಯ ಸಿಗುವಂತೆ ಮಾಡಲು ಸರ್ಕಾರ ಏನೆಲ್ಲಾ ಕ್ರಮಗಳನ್ನು ಕೈಗೊಂಡಿದೆ. | IMFL ಉತ್ಪಾದಕರಿಗೆ ಅವಶ್ಯಕ ಪ್ರಮಾಣದಲ್ಲಿ Portable ಮದ್ಯಸಾರ ಪೂರೈಕೆಯನ್ನು ಖಚಿತಪಡಿಸಲು ಮತ್ತು Non-Potable ಮದ್ಯಸಾರದ ದುರ್ಬಳಕೆಯನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದಂತೆ ಮಾತ್ರ ಪ್ರಾಥಮಿಕ ಡಿಸ್ಟಿಲರಿಗಳು (ನ್ಯೂಟ್ರಲ್ ಸ್ಪಿರಿಟ್ ಮತ್ತು ಇಥೆನಾಲ್ ಉತ್ಪಾದನಾ ಘಟಕಗಳು) ಕಾರ್ಯಾಚರಣೆ ಮುಂದುವರೆಸಿಕೊಂಡು ಹೋಗಲು ಪ್ರಾಥಮಿಕ ಡಿಸ್ಟಿಲರಿಗಳೊಂದಿಗೆ Memorandum of Understanding (MOU) ಅನ್ನು ಮಾಡಿಕೊಳ್ಳಲು ಅಬಕಾರಿ ಆಯುಕ್ತರಿಗೆ ಅನುಮತಿ ನೀಡಲಾಗಿದ್ದು, ಅದರಂತೆ, 2017-18ನೇ ಅಬಕಾರಿ ಸಾಲಿನಿಂದ ಪ್ರತಿ ವರ್ಷ ಪ್ರಾಥಮಿಕ ಡಿಸ್ಟಿಲರಿಗಳೊಂದಿಗೆ (ನ್ಯೂಟ್ರಲ್ ಸ್ಪಿರಿಟ್ ಮತ್ತು ಇಥೆನಾಲ್ ಉತ್ಪಾದನಾ ಘಟಕಗಳು) Memorandum of Understanding (MOU) ಅನ್ನು ಮಾಡಿಕೊಳ್ಳಲಾಗುತ್ತಿದೆ. 2025-26ನೇ ಅಬಕಾರಿ ಸಾಲಿನಲ್ಲಿ ಸಹ ಸದರಿ ಪ್ರಕ್ರಿಯೆಯನ್ನು ಮುಂದುವರೆಸಲಾಗಿರುತ್ತದೆ.<br>ಕೇಂದ್ರ ಸರ್ಕಾರವು ಪೆಟ್ರೋಲ್‌ನೊಂದಿಗೆ ಎಥನಾಲ್ ಮಿಶ್ರಣ ಯೋಜನೆಯಡಿಯಲ್ಲಿ ಎಥನಾಲ್ ಉತ್ಪಾದನೆಯಲ್ಲಿ ತೊಡಗಿರುವ ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಬಡ್ಡಿ ವಿನಾಯಿತಿ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯಡಿ ಯೋಜನಾ ವೆಚ್ಚದ ಶೇ 6%ರಷ್ಟು ಬಡ್ಡಿ ಅಥವಾ ಶೇ 50% ರಷ್ಟು ಸಾಲದ |

..2

| | | |
|---|---|---|
| | | ಮೇಲಿನ ಬಡ್ಡಿ, ಯಾವುದು ಕಡಿಮೆಯೋ ಅದನ್ನು ಆರ್ಥಿಕ ನೆರವು/ ಸಹಾಯವಾಗಿ ನೀಡುತ್ತದೆ. ಮುಂದುವರೆದು ಸಕ್ಕರೆ ಕಾರ್ಖಾನೆಗಳನ್ನು ವಿವಿಧ ಮೂಲಗಳಿಂದ ಉತ್ಪಾದಿಸುವ ಎಥನಾಲ್ ಗೆ ಕೇಂದ್ರ ಸರ್ಕಾರವು ಲಾಭದಾಯಕ ಬೆಲೆಯನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ. |

| ಕ್ರ.ಸಂ | ವಿವರ | ಪ್ರತಿ ಲೀ. ಒಂದಕ್ಕೆ ನಿಗದಿ ಪಡಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|
| 1. | ಕಬ್ಬಿನ ರಸದಿಂದ | 65.61 |
| 2. | ಬಿ.ಹೆವಿ ಮೊಲಾಸೆಸ್‌ನಿಂದ | 60.73 |
| 3. | ಸಿ.ಹೆವಿ ಮೊಲಾಸೆಸ್‌ನಿಂದ | 57.97 |
| 4. | ಎಫ್.ಸಿ.ಐ ನಿಂದ ಲಭ್ಯವಾಗುವ ಹೆಚ್ಚುವರಿ ಅಕ್ಕಿಯಿಂದ | 64.00 |
| 5. | ಹಾನಿಯಾದ ಆಹಾರ ಧಾನ್ಯಗಳಿಂದ | 64.00 |
| 6. | ಮೆಕ್ಕೆ ಜೋಳದಿಂದ | 71.86 |

| | | |
|---|---|---|
| | | ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳು / ಎಥನಾಲ್ ಘಟಕಗಳನ್ನು ಸ್ಥಾಪಿಸಲು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ ವಿಸ್ತರಣೆಗೆ ಅನುಮತಿ ನೀಡುವ ಸಂಬಂಧ ಹೊಸ ನೀತಿಯನ್ನು ರೂಪಿಸುವ ಕುರಿತು ಪರಿಶೀಲಿಸಲು ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 184 ಎಸ್‌ಬಿಎಫ್ 2022, ದಿನಾಂಕ:25.08.2023 ರಂದು ರಚಿಸಲಾಗಿದೆ. |
| (ಉ) | ಇಥೆನಾಲ್ ಘಟಕಗಳಿಂದ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳ ಕುರಿತು ಸರ್ಕಾರ ಅಧ್ಯಯನ ಮಾಡಿದೆಯೇ; ಮಾಡಿದ್ದಲ್ಲಿ, ಅಧ್ಯಯನದಲ್ಲಿ ಯಾವ ಯಾವ ಅಂಶಗಳು ಒಳಗೊಂಡಿದೆ? | ಇಥೆನಾಲ್ ಅನ್ನು ಡಿಸ್ಟಿಲರಿ ಘಟಕಗಳಲ್ಲಿ ಕಬ್ಬಿನ ರಸ/ ಸಿರಪ್, ಬಿ-ಹೆವಿ ಮೊಲ್ಯಾಸಸ್, ಸಿ-ಮೊಲ್ಯಾಸಸ್ ಅಥವಾ ಧಾನ್ಯ (ಅಕ್ಕಿ, ಜೋಳ, ಮೆಕ್ಕೆ ಜೋಳ, ಇತ್ಯಾದಿ)ಗಳನ್ನು ಉಪಯೋಗಿಸಿ ತಯಾರಿಸಲಾಗುತ್ತಿದೆ. ಪರಿಸರ ಸಂರಕ್ಷಣೆ ಕಾಯ್ದೆ 1986 ರಡಿಯಲ್ಲಿ ಹೊರಡಿಸಿರುವ ಪರಿಸರ ಆಘಾತ ಅಧ್ಯಯನ ಅಧಿಸೂಚನೆ 2006 (Environment Impact Assessment Notification, 2006) ರ ಪ್ರಕಾರ ಡಿಸ್ಟಿಲರಿ ಘಟಕಗಳು ಸ್ಥಾಪನೆಗೂ ಮುನ್ನ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಪರಿಸರ ವಿಮೋಚನಾ ಪತ್ರ (Environment Clearance) ವನ್ನು ಪಡೆಯಬೇಕಾಗಿರುತ್ತದೆ. ಸದರಿ ಪರಿಸರ ವಿಮೋಚನಾ ಪತ್ರ ಪಡೆಯುವ ಪ್ರಕ್ರಿಯೆಯಲ್ಲಿ ಉದ್ದಿಮೆಯವರು ಪರಿಸರ ಆಘಾತ ಅಧ್ಯಯನ (Environment Impact Assessment) ನಡೆಸಿ, ಉದ್ದೇಶಿತ ಯೋಜನೆಯಿಂದ ಪರಿಸರದ ಮೇಲಾಗುವ ಆಘಾತದ ಕುರಿತಂತೆ ವರದಿ |

...3

| | | |
|---|---|---|
| | | ಸಲ್ಲಿಸಿದ ನಂತರ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದ ನಿರ್ದೇಶನದಂತೆ ಪರಿಸರ ಸಾರ್ವಜನಿಕ ಸಭೆ (Environment Public Hearing) ನಡೆಸಿ, ನಂತರ ಪರಿಸರ ವಿಮೋಚನಾ ಪತ್ರವನ್ನು ನೀಡಲಾಗುತ್ತದೆ. ಸದರಿ ಪರಿಸರ ವಿಮೋಚನಾ ಪತ್ರದಲ್ಲಿ ಜಲಮಾಲಿನ್ಯ ನಿಯಂತ್ರಣ, ವಾಯುಮಾಲಿನ್ಯ ನಿಯಂತ್ರಣ, ತ್ಯಾಜ್ಯ ವಿಲೇವಾರಿ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಷರತ್ತುಗಳನ್ನು ವಿಧಿಸಲಾಗಿರುತ್ತದೆ.<br><br>ಡಿಸ್ಟಿಲರಿ ಘಟಕಗಳಿಗೆ ಮಂಡಳಿಯಿಂದ ಜಲ ಕಾಯ್ದೆ 1974 ಮತ್ತು ವಾಯು ಕಾಯ್ದೆ 1981 ರಡಿಯಲ್ಲಿ ನೀಡುವ ಸ್ಥಾಪನಾ ಸಮ್ಮತಿ ಪತ್ರದಲ್ಲಿ ಡಿಸ್ಟಿಲರಿ ಘಟಕದ ತ್ಯಾಜ್ಯ ನೀರನ್ನು Zero Liquid Discharge ಸಂಸ್ಕರಣಾ ವ್ಯವಸ್ಥೆ, ಅಳವಡಿಸಿ, ಯಾವುದೇ ತ್ಯಾಜ್ಯ ನೀರನ್ನು ವಿಸರ್ಜಿಸದಂತೆ ಷರತ್ತು ವಿಧಿಸಲಾಗುತ್ತಿದೆ. ಮುಂದುವರೆದು, ಡಿಸ್ಟಿಲರಿ ಘಟಕಗಳಿಗೆ ಚಾಲನಾ ಸಮ್ಮತಿ ಪತ್ರ ನೀಡುವ ಮುನ್ನ ಪರಿಸರ ವಿಮೋಚನ ಪತ್ರ ಹಾಗೂ ಸ್ಥಾಪನಾ ಸಮ್ಮತಿ ಪತ್ರದ ಷರತ್ತುಗಳ ಅನುಪಾಲನೆಯನ್ನು ಖಾತರಿಪಡಿಸಿಕೊಳ್ಳಲಾಗುತ್ತದೆ. ಇದಲ್ಲದೇ, ಡಿಸ್ಟಿಲರಿ ಘಟಕದ ಜಲ/ ವಾಯು ಮಾಲಿನ್ಯ ಮಟ್ಟದ ನಿರಂತರ ನಿಗಾವಹಿಸಲು Online Continuous Effluent/ Emission Monitoring System (OCEMS) ಅಳವಡಿಸಿ ಮಾಲಿನ್ಯ ನಿಯಂತ್ರಣ ಮಂಡಳಿಯ ಸರ್ವರ್‌ಗೆ ನೇರ ಸಂಪರ್ಕ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.<br><br>ಡಿಸ್ಟಿಲರಿ ಘಟಕಗಳನ್ನು ಮಂಡಳಿಯಿಂದ ನಿಯಮಿತವಾಗಿ ಪರಿವೀಕ್ಷಿಸಿ ಸಮ್ಮತಿ ಪತ್ರದ ಷರತ್ತುಗಳ ಉಲ್ಲಂಘನೆಗಳು ಕಂಡುಬಂದಲ್ಲಿ, ಕಾಯ್ದೆಯನುಸಾರ ಕ್ರಮಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಸಿಐ 257 ಎಸ್‌ಜಿಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು